ನಮ್ಮ ಆಸುಪಾಸಿನಲ್ಲಿ ಹೇಗೆ ಇಟ್ಟು ಕೊಳ್ಳಲು ಸಾಧ್ಯ? ನಮ್ಗೂ ಮಕ್ಳು ಮರಿ ಇದ್ದಾರೆ. ನೀವು ನಾವು ಹೇಳೋದನ್ನು ಆಲೋಚನೆ ಮಾಡಿ ನೋಡಿ..'

ರಾಯರ ಕಂಗಳಲ್ಲಿ ಕಂಬನಿ ಕೋಡಿಯಾಗಿ ಹರಿದಿತ್ತು. ಇಷ್ಟೊಂದು ಅಪಮಾನ, ಅಸಹಾಯಕತೆ ಅವರೆಂದೂ ಅನುಭವಿಸಿರಲಿಲ್ಲ. ತಗ್ಗಿಸಿದ ತಲೆ ಬಂದವರೆದುರು ಎತ್ತಲಾರದಂತಾಗಿತ್ತು. ಆದರೆ ಇದನ್ನೆಲ್ಲಾ ನೋಡುತ್ತಿದ್ದ ಅಪೂರ್ವಳಿಗೆ ಮಾತ್ರ ಸಹಿಸಲಾಗಲಿಲ್ಲ.

'ಕಳಿಸೋದಿಲ್ಲಾರೀ.. ಆತ ಇದೇ ಮನೇಲಿರ್ತಾನೆ.. ಏನ್ರೀ ಮಾಡ್ತೀರಾ..?' ಬಂದವರನ್ನು ತರಾಟೆಗೆ ತೆಗೆದುಕೊಳ್ಳುವಂತೆ ನುಡಿದಳು.

'ನೀನ್ಯಾರಮ್ಮಾ ನಮ್ಗೆ ಹೇಳಲು..? ನೀನು ಈ ಮನೆಯವರಿಗೆ ಮೂರನೆಯವಳು.. ನಿನ್ನ ಕೆಲಸ ಎಷ್ಟಿದೆ ಅಷ್ಟು ನೋಡ್ಕೋ ತಿಳೀತಾ?' ಗದರುವ ದನಿಯಲ್ಲಿ ನುಡಿದ ಆತ.

'ನಾನು ಈ ಮನೆ ಅನ್ನ ತಿಂದಿದ್ದೀನಿ.. ಇಲ್ಲೇ ಇದ್ದೀನಿ. ಮಾತನಾಡ್ತೀನಿ.. ಏನೆಂದೆ..? ಸೂರ್ಯ ಅಪರಾಧೀನಾ? ಒಂದ್ಸಲ ತಪ್ಪು ಮಾಡಿದ್ರೆ.. ಆತ ಸಾಯೋ ತನಕನೂ ಅಪರಾಧಿನೇನಾ? ಮನುಷ್ಯನಿಗೆ ಪ್ರಾಯಶ್ಚಿತ್ತ ಪಡೋ ಸಂದರ್ಭ ಇರುತ್ತೆ... ಮಾಡಿರುವ ತಪ್ಪಿಗೆ ಆತ ಪ್ರಾಯಶ್ಚಿತ್ತನೇ ಪಡದೇ ಮತ್ತೆ ಅಂಥ ಕುಕೃತ್ಯ ಮಾಡಿಕೊಂಡೇ ಮುಂದುವರೆದ್ರೆ.. ನೀವು ಹೇಳಿದಂತೆ ಸಮಾಜ ಘಾತುಕ ವ್ಯಕ್ತಿ ಅಂತ ದೂರ ಇಡ್ಬೇಕಿತ್ತು.. ಆದ್ರೆ ಆ ವ್ಯಕ್ತಿ ಸರಿ ಹೋಗ್ತಿದ್ದಾನೆ. ನಮ್ಮನಿಮ್ಮೆಲ್ಲರಂತೆ ಸಾಮಾನ್ಯವಾಗಿ ಬದುಕಲು ಪ್ರಯತ್ನ ಪಡ್ತಿದ್ದಾನೆ. ತಾನು ಮಾಡಿದ ತಪ್ಪಿನ ಅರಿವು ಆತನಿಗಾಗಿದೆ. ಅವ್ನು ಈ ಮುಖ್ಯ ವಾಹಿನಿಯಲ್ಲಿ ಎಲ್ಲರಂತೆ ಸಹಜವಾಗಿ ಬಾಳಲು ಯತ್ನಿಸುತ್ತಿರುವಾಗ ನಿಮ್ಮಂಥ ಹಿರಿಯರು ಮುಂದೆ ನಿಂತು ಮಾರ್ಗದರ್ಶನ ಮಾಡಬೇಕೇ ಹೊರತು ಹೀಗೆ ಬಿದ್ದವರ ಮೇಲೆ ಕಲ್ಲು ಎಸೆಯುವಂಥ ಕೆಲಸ ಮಾಡ್ಬಾರ್ದು ಸಾರ್.. ನಿಮ್ಮಂಥವರಿಗೆ ಅದು ಶೋಭೆಯಲ್ಲ..!'

ಅಪೂರ್ವ ಅಷ್ಟಕ್ಕೆ ಸುಮ್ಮನಾಗದೆ,'ಸೂರ್ಯ ಕೊಲೆ ಮಾಡಿದ್ರು ಅಂದ್ರಲ್ವಾ.. ಈಗ ಮಾಡಿದ್ದಾ? ಬುದ್ಧಿ ಬಂದ್ಮೇಲೆ ಮಾಡಿದ್ದಾ? ಅಲ್ವಲ್ಲಾ.. ಬಾಲ್ಯಾವಸ್ಥೆಯಲ್ಲಿ ಮಾಡಿದ್ದು.. ಅವ್ನು ಬಾಲಪರಾಧಿಯಾಗಿದ್ದು.. ಆಗ ಅದು ವಿವೇಚನೆ ಇಲ್ಲದೇ ಆದ ತಪ್ಪು... ಈಗ ಈ ಮನಸ್ಥಿತಿಯಲ್ಲಿ ಮಾಡಿದ್ದೇ ಆಗಿದ್ರೆ.. ನಿಮ್ಮ ಮಾತನ್ನು ಒಪ್ಕೋಬಹುದಿತ್ತು. ಆದ್ರೆ ವಸ್ತುಸ್ಥಿತಿ ಅದಲ್ಲ.. ಸೂರ್ಯ ಯಾವತ್ತೋ ಅರಿವಿಲ್ಲದೆ ಮಾಡಿರುವ ತಪ್ಪಿಗೆ ಈಗಾಗ್ಲೇ ಶಿಕ್ಷೆ ಅನುಭವಿಸಿದ್ದಾರೆ. ಜೈಲು ಶಿಕ್ಷೆ ಅಲ್ಲದೆ ಹೆತ್ತವರಿಂದಲೂ ದೂರವಿದ್ದ ಶಿಕ್ಷೆ ಅನುಭವಿಸಿದ್ದಾರೆ... ಇಷ್ಟು ಸಮಯದ ಮೇಲೆ ಮನೆಯವ್ರು ಅವ್ರನ್ನು ಮನೇಲಿರಲು ಅವಕಾಶ ಕೊಟ್ಟಿದ್ದಾರೆ. ಅದಕ್ಕೆ ನೀವು ಅಡ್ಡಿಯಾಗಬೇಡಿ. ಸೂರ್ಯ ಬದಲಾಗುವ ಪ್ರಯತ್ನ ಮಾಡ್ತಿದ್ದಾರೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು.. ನಿಮ್ಗೆಲ್ಲಾ ಕೈ ಮುಗಿದು ಕೇಳ್ಕೋತ್ತೀನಿ.. ನಾನು ತುಂಬಾ ಚಿಕ್ಕವಳು.. ಅವ್ರನ್ನ ಇಲ್ಲಿರಲು ಅವಕಾಶ ಮಾಡಿಕೊಡಿ, ರಾಯರಿಗೆ ನೀವು ನಿಜವಾಗಲೂ ಗೌರವ ಕೊಡೋದಾದ್ರೆ. ಅವ್ರಿಗೆ ಇಷ್ಟು ವರ್ಷಗಳ ನಂತರ ಅವರ ಮಗನನ್ನು ದೊರಕಿಸಿ ಕೊಡಿ.. ನಿಮ್ಮೆಲ್ಲರ ಸಹಕಾರ, ಪ್ರೀತಿ ವಿಶ್ವಾಸಗಳಿಂದ ಸೂರ್ಯ ನಮ್ಮೆಲ್ಲರ ನಡುವೆ ನಮ್ಮ ಹಾಗೆ ಸಹಜವಾಗಿ ಬದುಕಲು ಅವಕಾಶ ಮಾಡಿಕೊಡಿ.. ಅವ್ರ ತಪ್ಪಿನ ಅರಿವಾಗಿದೆ ಅವ್ರಿಗೆ.. ಪ್ರಾಯಶ್ಚಿತ್ತ ಪಡ್ತಾ ಇದ್ದಾರೆ. ಅವ್ರಿಗೆ ಒಂದು ಅವಕಾಶ ನಾವು ಮಾಡಿಕೊಡಲೇ ಬೇಕಾಗಿರೋದು ನಮ್ಮ ಕರ್ತವ್ಯ. ಮಾಡಿದ ತಪ್ಪನ್ನು ಭೂತ ಕನ್ನಡಿಯಲ್ಲಿ ನೋಡುತ್ತ, ಅದನ್ನೇ ತೋರಿಸಿ ಅವ್ರನ್ನ ಮಾನಸಿಕವಾಗಿ ಕುಗ್ಗಿಸುವ ಕೆಲಸ ಮಾಡುವ ಬದಲು ಒಂದಷ್ಟು ಔದಾರ್ಯತೆ ಬೆಳೆಸಿಕೊಳ್ಳೋಣ. ಅವ್ರಿಗೆ ಹೊಸತಾಗಿ ಬದುಕುವ ಮಾರ್ಗ ತೋರಿಸುತ್ತ ಹೊಸ ಮನುಷ್ಯನನ್ನಾಗಿ ಮಾಡೋಣ. ಆಗದೇನು..?'

ಅಪೂರ್ವಳ ಹರಿತವಾದ ಮಾತುಗಳು ಆಲಿಸಿದ ನಂತರ ಅಲ್ಲಿ ಸೂಜಿ ಬಿದ್ದರೂ ಆಲಿಸುವಷ್ಟು ಮೌನ ವ್ಯಾಪಿಸಿತು. ಮೊದಲು ಸಾವರಿಸಿಕೊಂಡ ಆ ಹಿರಿಯರು ಮುಂದೆ ಬಂದು ಅಪೂರ್ವಳ ತಲೆದಡವಿದರು, 'ನೀನು ಚಿಕ್ಕವಳು ಎನ್ನುತ್ತಲೇ ತುಂಬಾ ದೊಡ್ಡ ಮಾತುಗಳನ್ನಾಡಿ ಬಿಟ್ಟೆಯಮ್ಮಾ.. ವಯಸ್ಸಿನಲ್ಲಿ ದೊಡ್ಡದಾಗಿ ಏನೂ ಉಪಯೋಗವಿಲ್ಲ ಕಂದಾ.. ನಿನ್ನ ಹಾಗೆ ಆಲೋಚನೆಯಲ್ಲಿ ದೊಡ್ಡದಾಗಬೇಕು.. ನೀನು ಹೇಳಿದ್ದು ಸರಿ.. ರಾಯರ ಮಗ ಸರಿ ಹೋಗಬೇಕೆನ್ನುವುದು ನಮ್ಮ ಆಶಯ ಕೂಡಾ. ಒಳ್ಳೇದಾಗಲೀ' ಎಂದು ಹಾರೈಸಿದರು.

'ರಾಯರೇ.. ನಮ್ಮ ಮಾತುಗಳಿಂದ ನಿಮ್ಗೆ ನೋವಾಗಿದೆ ಅಂತ ಗೊತ್ತು.. ದಯವಿಟ್ಟು ಕ್ಷಮಿಸಿ.. ನಿಮ್ಮ ಮಾರ್ಗದರ್ಶನದಲ್ಲಿ ಸೂರ್ಯ ಮತ್ತೆ ನಿಮ್ಮ ಬದುಕಲ್ಲಿ ಬೆಳಕು ತರುವಂತಾಗಲೀ..!' ಕೈ ಮುಗಿದು ಅಲ್ಲಿಂದ ಉಳಿದವರ ಜೊತೆ ನಿರ್ಗಮಿಸಿದರು.

**ಅಧ್ಯಾಯ 12**

ಪ್ರಭಾಕರರಾಯರು ಎದ್ದು ಪ್ರಯಾಸದಿಂದ ಮನೆಯತ್ತ ಹೆಜ್ಜೆ ಹಾಕಿದಾಗ, ಅಪೂರ್ವ ಅವರಿಗೆ ಆಸರೆಯಾದಳು. ಮುಂಬಾಗಿಲಲ್ಲೇ ಅಚೇತನರಾಗಿ ನಿಂತಿದ್ದ ವಿಜಯಮ್ಮ ಮತ್ತು ಸೂರ್ಯ ಸರಿದು ನಿಂತು ರಾಯರಿಗೆ ಒಳ ಪ್ರವೇಶಿಸಲು ಅನುವು ಮಾಡಿ ಕೊಟ್ಟರು. ರಾಯರು ಹಾಲ್‌ನ ಸೋಫಾದಲ್ಲೇ ಕುಸಿದು ಕುಳಿತರು. ಅವರ ಮನದಲ್ಲಿ ನಡೆಯುತ್ತಿದ್ದ ಮಂಥನ ಅವರ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಅಲ್ಲಿ ಏರ್ಪಟ್ಟ ಮೌನ, ಮಾತುಗಳಿಗಿಂತಲೂ ಅರ್ಥಗರ್ಭಿತವಾಗಿತ್ತು. ನೆರೆಹೊರೆಯರೆಲ್ಲ ಸೇರಿ ಈ ಮಟ್ಟಕ್ಕೆ ಇಳಿಯ ಬಹುದೆಂಬ ಕಲ್ಪನೆಯೇ ಇರಲಿಲ್ಲ.

ಮನೆಯವರ ನಡುವೆ ನಿಲ್ಲಲಾರದೇ ಅಪೂರ್ವ ತನ್ನ ಕೋಣೆಯತ್ತ ಸಾಗಿದಾಗ, ರಾಯರು ಅವಳನ್ನು ತಡೆದರು, 'ಅಪೂರ್ವ.. ಇಲ್ಲಿ ಬಾಮ್ಮಾ.. ನೀನು' ಅವಳನ್ನು ಕರೆಸಿಕೊಂಡು ಅವಳನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿದರು. ಆಪ್ಯಾಯಮಾನದಿಂದ ಅವಳ ತಲೆದಡವಿದಾಗ ಅವರ ಕಣ್ಣಂಚಿನಲ್ಲಿ ಕಂಡೂ ಕಾಣದಂಥ ನೀರಿನ ತೆರೆಯಿತ್ತು.

'ಸೂರ್ಯನನ್ನು ಸಮರ್ಥಿಸಿಕೊಂಡು ಅಷ್ಟೊಂದು ಮಾತನಾಡಿದೆಯಲ್ಲಾ..! ನಿನ್ನೆದುರು.. ನಾನು ಕೂಡಾ ತುಂಬಾ ಸಣ್ಣವನಾಗಿ ಬಿಟ್ಟೆನಮ್ಮಾ' ಎಂದರು. ಅವರ ಮಾತು ಅರ್ಥವಾಗದೇ ಅಪೂರ್ವ ಅವರ ಮುಖ ನೋಡುತ್ತ ಕುಳಿತಾಗ, 'ಸೂರ್ಯನನ್ನು ಈ ಮನೆಯಲ್ಲಿರಲು ಅನುಮತಿ ಕೊಟ್ಟಾಗ, ಅವನ ಬಗ್ಗೆ ನನಗೆ ಅನುಕಂಪವಾಗಲಿಲ್ಲ ಅಕ್ಕರೆಯಾಗಲೀ ಇರಲಿಲ್ಲ. ನಾನು ಕೇವಲ ವಿಜಯಳಿಗಾಗಿ ಇದಕ್ಕೆ ಒಪ್ಪಿಗೆ ಕೊಟ್ಟೆ. ಎದೆ ನೋವು ಬಂದು ನಾನು ಐಸಿಯುನಲ್ಲಿ ಮಲಗಿದ್ದಾಗ ನಾನು ಬಹಳ ಯೋಚನೆ ಮಾಡಿದೆ. ನನ್ನ ನಂತರ ವಿಜಯಳ ಗತಿ ಏನು? ತಾಯಿ ಮಗನನ್ನು ದೂರ ಮಾಡುವ ಹಕ್ಕು ನನಗಿಲ್ಲ ಅನ್ನಿಸಿತು. ನನ್ನ ಕೈ ಹಿಡಿದಿದ್ದಕ್ಕೆ ವಿಜಯಳಿಗೆ ಪಶ್ಚಾತ್ತಾಪ ಆಗಿದೆ ಅಂತ ಅವ್ಳು ಹೇಳಿದಾಗ ನನ್ನ ಮನಸ್ಸು ಒಡೆದು ಚೂರಾಯಿತು. ಅವ್ರಿಬ್ಬರನ್ನ ದೂರ ಮಾಡುವ ಹಕ್ಕು ನನಗಿಲ್ಲ. ತಾಯಿ ಮಗನ ಸಂಬಂಧ ಭಗವಂತನೇ ಭೂಮೀಲಿ ಬರೆದು ಕಳಿಸಿರುವಾಗ ಅದನ್ನೇ ದೂರ ಮಾಡಲು ನಾನ್ಯಾರು? ನಾನು ಇರೋ ತನಕ ಸರಿ. ಅನಂತರ ಅವ್ಳಿಗೆ ಅವ್ನೇ ತಾನೇ ಆಸರೆಯಾಗಬೇಕು. ಆ ಕಾರಣಕ್ಕೆ ನಾನು ಒಪ್ಕೊಂಡೆ. ಅವ್ನ ಮುಖ ನೋಡಿದಾಗಲೆಲ್ಲ ನನ್ಗೆ ಅವನು ಮಾಡಿದ ತಪ್ಪೇ ಬೃಹದಾಕಾರವಾಗಿ ಕಾಣ್ತಿತ್ತು. ಆ ನೋವು, ಸಂಕಟ ಅವನನ್ನು ಹಾರ್ದಿಕವಾಗಿ ಸ್ವೀಕರಿಸಲು ನನ್ನನ್ನು ಹಿಮ್ಮೆಟ್ಟುವಂತೆ ಮಾಡುತ್ತಿತ್ತು.

**(ಸಶೇಷ)**

## ವಿನಂತಿ

ಸಾವಿರ
ಕನಸುಗಳ ಒಡೆಯ
ನಾನು,
ನನ್ನ ಕನಸಿನ
ಕನ್ನಡಿಯ
ಒಡೆಯದಿರು
ನೀನು...!

★ ಚಂದ್ರಶೇಖರ
ಮಾಡಲಗೇರಿ

